2) ಕಾರಂಜಾ ಜಲಾಶಯದಿಂದ ಭಾಲ್ಕಿ ಪಟ್ಟಣ ಹಾಗೂ ಬೀದರ ನಗರಕ್ಕೆ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ನದಿಗೆ ನೀರು ಬಿಡುಗಡೆ ಮಾಡುತ್ತಿರುವುದು.

ಊ) ಟೆಂಡರ್ ನಿಯಮಾವಳಿಗಳ ಪ್ರಕಾರ ಗುತ್ತಿಗೆದಾರರಿಂದ ಕಾಮಗಾರಿಯನ್ನು ನಿಗಿದಿತ ಸಮಯದಲ್ಲಿ ಪೂರ್ಣಗೊಳಿಸಲು ಉಂಟಾಗಿರುವ ವಿಳಂಬಕ್ಕೆ ಗುತ್ತಿಗೆದಾರರ ಮೇಲೆ ಮಂಡಳಿಯು ದಂಡ ವಿಧಿಸುತ್ತದೆ.

ಋ) ಭಾಲ್ಕಿ ನೀರು ಸರಬರಾಜು ಯೋನೆಯಡಿಯಲ್ಲಿ ಬ್ಯಾರೇಜ್‌ನ ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಮಂಡಳಿಯು ಕ್ರಮವಹಿಸಿದೆ.

1066 ಶ್ರೀ ಗೋಪಾಲಭಂಡಾರಿ ಹೆಚ್. : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ–17 ಮತ್ತು ರಾಷ್ಟ್ರೀಯ ಹೆದ್ದಾರಿ–13 ಇವುಗಳನ್ನು ಸಂಪರ್ಕ ಮಾಡುವ ತೀರ್ಥಹಳ್ಳಿ–ಆಗುಂಬೆ–ಹೆಬ್ರಿ–ಮಣಿಪಾಲ–ಉಡುಪಿ ರಸ್ತೆ ಇವುಗಳನ್ನು ಮೇಲ್ದರ್ಜೆಗೇರಿಸುವ ಹಾಗೂ ಆಗುಂಬೆ ಘಾಟ್‌ನಲ್ಲಿ ಪುನಃ ವಾಹನ ಸಂಚರಿಸಲು ಸರ್ಕಾರ ಕೈಗೊಂಡ ಕ್ರಮವೇನು;

ಆ) ಆಗುಂಬೆ–ಸೋಮೇಶ್ವರ–ವಲಿದ್ರಾತಿ–ಕಾರ್ಕಳ ರಸ್ತೆ ಕಿರಿದಾಗಿದ್ದು, ರಾಜ್ಯ ಹೆದ್ದಾರಿಯಾಗಿರುವ ಈ ರಸ್ತೆಯನ್ನು ಅಗಲಗೊಳಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಬೆಳ್ಮಣ್–ಮುಂತೂರು–ಕಟೀಲು–ಬಜ್ಪೆ ರಸ್ತೆಗಳನ್ನು ಅಗಲಗೊಳಿಸುವ ಬಗ್ಗೆ ಸರ್ಕಾರದ ಕ್ರಮವೇನು;

ಈ) ಸುಬ್ರಹ್ಮಣ್ಯ, ಧರ್ಮಸ್ಥಳ, ಕಾರ್ಕಳ–ಉಡುಪಿ ರಸ್ತೆಯಲ್ಲಿ ಕಾರ್ಕಳಪಳ್ಳಿ ವೆಳ್ಳೆ ಉಡುಪಿ ಮಧ್ಯೆ ಅಗಲ ಕಿರಿದಾಗಿದ್ದು ರಸ್ತೆ ಅಗಲಗೊಳಿಸಿ ಡಾಂಬರೀಕರಣಗೊಳಿಸಲು ಸರ್ಕಾರ ಎಂದು ಕ್ರಮ ಕೈಗೊಳ್ಳುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ತೀರ್ಥಹಳ್ಳಿ–ಆಗುಂಬೆ–ಹೆಬ್ರಿ–ಮಣಿಪಾಲ–ಉಡುಪಿ ರಸ್ತೆಯು ಪಡುಬಿದ್ರೆ–ಚಿಕ್ಕಾಲಗುಡ್ಡ ರಾಜ್ಯ ಹೆದ್ದಾರಿ–1ರ ಭಾಗವಾಗಿದ್ದು, ಶಿವಮೊಗ್ಗ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಹಾದುಹೋಗುತ್ತದೆ.

ಈ ರಸ್ತೆಯು ಹಲವಾರು ಮೊನೆಚಾದ ತಿರುವುಗಳನ್ನು ಹೊಂದಿದ್ದು, ರಸ್ತೆಯ ಇಕ್ಕೆಲಗಳಲ್ಲಿ ರಕ್ಷಿತ ಅರಣ್ಯ ಪ್ರದೇಶವಿದ್ದು, ರಸ್ತೆಯ ಅಗಲೀಕರಣಕ್ಕೆ

ಅರಣ್ಯ ಪ್ರದೇಶದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ.

ಶಿವಮೊಗ್ಗ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯ ಸಂಪೂರ್ಣ ಆಗುಂಬೆ ಘಾಟ್ ರಸ್ತೆಯನ್ನು ಅಗಲಗೊಳಿಸಿ ಅಭಿವೃದ್ಧಿಪಡಿಸುವ ಬಗ್ಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ತಾಂತ್ರಿಕ ಸಮಾಲೋಚಕರನ್ನು ನೇಮಿಸಲು. ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.

2008–09ನೇ ಸಾಲಿನಲ್ಲಿ ಸದರಿ ರಸ್ತೆಯನ್ನು ರೂ.7.00 ಲಕ್ಷಗಳ ಅನುದಾನದಲ್ಲಿ ನಿರ್ವಹಣೆ ಮಾಡಿ ವಾಹನ ಸಂಚಾರಕ್ಕೆ ಯೋಗ್ಯವಿಡಲಾಗಿದೆ. 2009–10ನೇ ಸಾಲಿನ ಪೂರ್ವ ಮುಂಗಾರು ದುರಸ್ತಿ ಕಾಮಗಾರಿಗಳು ಸಹ ಪ್ರಗತಿಯಲ್ಲಿವೆ.

ಆ) ಆಗುಂಬೆ–ಸೋಮೇಶ್ವರ–ವಲಿದ್ರಾತಿ–ಕಾರ್ಕಳ ರಸ್ತೆಯು ರಾಜ್ಯ ಹೆದ್ದಾರಿ–1ರ ಭಾಗವಾಗಿದ್ದು, ಈ ರಸ್ತೆಯ ಸೀತಾನದಿ–ಸೋಮೇಶ್ವರವರೆಗಿನ ಉದ್ದವು ಏಕಪಥ ರಸ್ತೆಯಾಗಿದೆ. ಇದರಲ್ಲಿ 4.40 ಕಿ.ಮೀ ಉದ್ದದ ರಸ್ತೆಯನ್ನು ಮಧ್ಯಮ ಪಥಕ್ಕೆ ಅಗಲಗೊಳಿಸಿ ಅಭಿವೃದ್ಧಿ ಪಡಿಸಲು ಸುವರ್ಣ ರಸ್ತೆ ಯೋಜನೆಯಡಿ ರೂ.71.26 ಲಕ್ಷ ಅನುದಾನ ಮಂಜೂರಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸಧ್ಯದಲ್ಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಇದೇ ಹೆದ್ದಾರಿ ಮುದ್ರಾಡಿ–ಕಾರ್ಕಳವರೆಗಿನ ರಸ್ತೆಯು ಸಹ ಏಕಪಥವಾಗಿದೆ. ಇದರಲ್ಲಿ 1.63 ಕಿ.ಮೀ ಉದ್ದವನ್ನು ಮಧ್ಯಮ ಪಥಕ್ಕೆ ಅಗಲಗೊಳಿಸಿ ಅಭಿವೃದ್ಧಿ ಪಡಿಸಲು ಸುವರ್ಣ ರಸ್ತೆ ಯೋಜನೆಯಡಿ ರೂ.17.96 ಲಕ್ಷಗಳ ಅನುದಾನ ಮಂಜೂರಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸಧ್ಯದಲ್ಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಬೇಳ್ಮಣ್–ಮುಂತೂರು–ಕಟೀಲು–ಬಜ್ಪೆ ರಸ್ತೆಯು ಮಂಗಳೂರು–ಅತ್ರಾಡಿ–ರಾಜ್ಯ ಹೆದ್ದಾರಿ–67ರ ಭಾಗವಾಗಿದ್ದು, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹಾದು ಹೋಗುತ್ತದೆ. ಉಡುಪಿ ಜಿಲ್ಲೆಯ ವ್ಯಾಪ್ತಿಯ ರಸ್ತೆಯು ಏಕಪಥ ರಸ್ತೆಯಾಗಿದೆ. ಇದರಲ್ಲಿ 1.24 ಕಿ.ಮೀ. ಉದ್ದವನ್ನು ಮಧ್ಯಮ ಪಥಕ್ಕೆ ಅಗಲಗೊಳಿಸಿ ಅಭಿವೃದ್ಧಿ ಪಡಿಸಲು ಸುವರ್ಣ ರಸ್ತೆ ಯೋಜನೆಯಡಿ ರೂ. 14.94 ಲಕ್ಷ ಅನುದಾನ ಮಂಜೂರಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸಧ್ಯದಲ್ಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ 23.40 ಕಿ.ಮೀ ಉದ್ದದ ರಸ್ತೆಯಲ್ಲಿ 20.60 ಕಿ.ಮೀ ಉದ್ದವು ಈಗಾಗಲೇ ಮಧ್ಯಮ ಪಥದ ರಸ್ತೆಯಾಗಿದೆ. ಮಂಗಳೂರು

ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆ ಭಾಗವನ್ನು ದ್ವಿಪಥ ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸಲಾಗುತ್ತಿದೆ.

ಸುಬ್ರಹ್ಮಣ್ಯ, ಧರ್ಮಸ್ಥಳ, ಕಾರ್ಕಳ–ಉಡುಪಿ ರಸ್ತೆ ಭಾಗವನ್ನು ಕೇಂದ್ರ ರಸ್ತೆ ನಿಧಿ ಯೋಜನೆಯಡಿಯಲ್ಲಿ ಅಗಲಗೊಳಿಸಿ ಅಭಿವೃದ್ಧಿಪಡಿಸಲು ರೂ.200.00 ಲಕ್ಷಗಳ ಅನುದಾನ ಮಂಜೂರಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸದ್ಯದಲ್ಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

762 ಶ್ರೀ ದಿನೇಶ್‌ಕುಮಾರ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ನೈಸ್ ಕಂಪನಿಗೆ ನೀಡಲಾದ ಒಟ್ಟು ಭೂಮಿ ಎಷ್ಟು; (ಸರ್ಕಾರ, ಸಾರ್ವಜನಿಕ ಮತ್ತು ರೈತರ ಜಮೀನುಗಳ ಎಕರೆವಾರು ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು);

ಆ) ಟೆಂಡರ್‌ನ ನಿಬಂಧನೆಯಂತೆ ರಸ್ತೆ ಕಾಮಗಾರಿಯನ್ನು ನೈಸ್ ಕಂಪನಿಯು ಯಾವ ದಿನಾಂಕದೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ ಹಾಗೂ ಇಲ್ಲಿಯವರೆಗೂ ಸಾಧಿಸಿದ ಪ್ರಗತಿಯೇನು (ವಿವರ ಒದಗಿಸುವುದು);

ಇ) ಈಗಾಗಲೇ ಸಾರ್ವಜನಿಕರ ಬಳಕೆಗೆ ಒದಗಿಸಿರುವ ನೈಸ್ ರಸ್ತೆಗಳಾವುವು;

ಈ) ಟೆಂಡರ್ ಅವಧಿಯಲ್ಲಿ ನಿಗಧಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚು ಟೋಲ್ ಹಣವನ್ನು ಸಂಗ್ರಹಿಸಲು ಸರ್ಕಾರ ಅವಕಾಶ ಕಲ್ಪಿಸಿದೆಯೇ; ಕಲ್ಪಿಸಿದ್ದಲ್ಲಿ ಇದಕ್ಕೆ ಕಾರಣವೇನು; (ವಿವರ ಒದಗಿಸುವುದು);

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಒಟ್ಟು 7278 ಎಕರೆ 0.27 ಗಂಟೆ ಭೂಮಿಯನ್ನು ನೀಡಲಾಗಿದೆ:

ಸರ್ಕಾರಿ: ಸಾರ್ವಜನಿಕ ಭೂಮಿ–5144 ಎಕರೆ
28 ಗುಂಟೆಗಳು

ಖಾಸಗಿ (ರೈತರ) ಭೂಮಿ –2133 ಎಕರೆ
12.77 ಗುಂಟೆಗಳು

ಆ) ಸರ್ಕಾರವು ನೈಸ್ ಸಂಸ್ಥೆಯೊಂದಿಗೆ ಮಾಡಿಕೊಂಡ ಫ್ರೇಮ್‌ವರ್ಕ್ ಆಗ್ರಿಮೆಂಟ್‌ನಂತೆ ಫೈನಾನ್ಸಿಯಲ್ ಕ್ಲೋಸರ್‌ನ ದಿನಾಂಕ: 29–3–2005 ರಿಂದ ಹತ್ತು ವರ್ಷಗಳೊಳಗೆ ಅಂದರೆ ದಿನಂಕ: 28–3–2015 ರೊಳಗೆ ಯೋಜನೆ–ಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಇಲ್ಲಿಯವರೆಗೆ 9.1 ಕಿ.ಮೀ ಲಿಂಕ್